ವೆಚ್ಚ. ಮೀನು ಮಾರಾಟದಲ್ಲಿ ಖಾಸಗಿಯವರಿಂದ ಹೆಚ್ಚಿನ ಸ್ಪರ್ಧೆ. ಕರಾವಳಿ ಮೀನು ಉತ್ಪಾದನೆಯಲ್ಲಿ ಏರುಪೇರು.

ಈ ನಿಗಮದ ಮಾಸಿಕ ಆದಾಯ ರೂ. 11.00 ಲಕ್ಷ. ಆದರೆ ಮಾಸಿಕ ಖರ್ಚು ರೂ. 17.00 ಲಕ್ಷ. ಈ ಖರ್ಚನ್ನು ಕಡಿಮೆ ಮಾಡಲು, ಆಡಳಿತ ಮಂಡಳಿಯು ಈಗಾಗಲೇ ತದಡಿ ಮತ್ತು ಕುಳಾಯಿ ಮಂಜುಗಡ್ಡೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಕ್ರಮವಾಗಿ ರೂ. 16.00ಲಕ್ಷ ಮತ್ತು ರೂ. 12.50 ಲಕ್ಷಕ್ಕೆ ಗುತ್ತಿಗೆ ರೂಪದಲ್ಲಿ ಕೊಟ್ಟಿದೆ. ನಿಗಮವು ಉಳ್ಳಾಲ ಮಂಜುಗಡ್ಡೆ ಕಾರ್ಖಾನೆಯನ್ನೂ ಕೂಡ ರೂ. 4.02 ಲಕ್ಷಗಳಿಗೆ ಗುತ್ತಿಗೆಗೆ ಕೊಡಲು ನಿರ್ಧರಿಸಿದೆ. ಈ ನಿಗಮದಲ್ಲಿ ಒಟ್ಟು 325 ಖಾಯಂ ಮತ್ತು ದಿನಗೂಲಿ ನೌಕರರು ಕೆಲಸ ಮಾಡುತ್ತಿದ್ದಾರೆ. ಇವರನ್ನು ಈ ನಿಗಮದಲ್ಲಿ ಮುಂದುವರೆಸಲಾಗುವುದು.

ಕರ್ನಾಟಕ ರಾಜ್ಯ ಮಹಾಲೇಖಪಾಲರು, ಬೆಂಗಳೂರು ಇವರು ಈ ನಿಗಮದ ಲೆಕ್ಕ ಪರಿಶೋಧನಾ ಕಾರ್ಯವನ್ನು 1985ರಿಂದ 1989ರ ತನಕ ಮಾಡುವಾಗ ಕೆಲವು ಅಕ್ರಮಗಳು ನಡೆದಿರುವುದಾಗಿ ತಿಳಿಸಿದ್ದಾರೆ. ಇವುಗಳನ್ನು ಸರ್ಕಾರವು ಪರಿಶೀಲಿಸಿ, ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಶಿಸ್ತು ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಈ ನಿಗಮವು ಸುಸೂತ್ರವಾಗಿ ನಡೆಯಬೇಕೆಂದು ಮಾನ್ಯ ಸದಸ್ಯರು ನೀಡಿರುವ ಸಲಹೆಯನ್ನು ಒಪ್ಪಿ ಇದರ ಬಗ್ಗೆ ಸೂಕ್ತ ಯೋಜನೆಯನ್ನು ಹಾಕಿಕೊಳ್ಳಲಾಗುವುದು.

6. ಚಿಕ್ಕಮಗಳೂರು ಜಿಲ್ಲಾಪರಿಷತ್ತಿಗೆ ನೀರು ಸರಬರಾಜಿಗಾಗಿ ಹೆಚ್ಚುವರಿ ಅನುದಾನ ಬಿಡುಗಡೆ

ಶ್ರೀಮತಿ ಮೋಟಮ್ಮ (ಮೂಡಿಗೆರೆ):– ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿನಲ್ಲಿ 1992–93ರ ಸಾಲಿಗೆ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಮತ್ತು ತ್ವರಿತ ನೀರು ಸರಬರಾಜು ಯೋಜನೆಯಲ್ಲಿ ಲೆಕ್ಕ ಶೀರ್ಷಿಕೆ ಸಂಖ್ಯೆ 2215 ಒಟ್ಟು 50 ಲಕ್ಷ ರೂಪಾಯಿಗಳ ಹೆಚ್ಚುವರಿ ಅನುದಾನವು ಜಿಲ್ಲಾ ಪರಿಷತ್ (ಚಿಕ್ಕಮಗಳೂರಿಗೆ) ಅಗತ್ಯವಿದ್ದು ಕೂಡಲೇ ಬಿಡುಗಡೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

(ಪ್ರೊ ಬಿ. ಎಂ. ಇದಿನಬ್ಬರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):–

ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಗೆ ಹಣವನ್ನು ಬಿಡುಗಡೆ ಮಾಡುವುದರಲ್ಲಿ ಸ್ವಲ್ಪ ತೊಂದರೆ ಉಂಟಾಗಿದ್ದು ನಿಜ. 1992–93ನೇ ಸಾಲಿನಲ್ಲಿ ರೂ. 99 ಲಕ್ಷ ಅಲೊಕೇಷನ್. ಆದರಲ್ಲಿ 66 ಲಕ್ಷ ರೂಪಾಯಿಗಳು ಮಾತ್ರ ಬಿಡುಗಡೆಯಾಗಿದೆ. ಇನ್ನು ರೂ. 33 ಲಕ್ಷ ಬಿಡುಗಡೆಯಾಗಬೇಕಾಗಿದೆ. ಇದಕ್ಕೆ ಮುಖ್ಯ ಕಾರಣವೇನೆಂದರೆ ಗೌವರ್ನಮೆಂಟ್ ಆಫ್ ಇಂಡಿಯಾದಿಂದ 31 ಕೋಟಿ ಏನು ಇದೆ. ಆದರಲ್ಲಿ 22 ಕೋಟಿ ರೂಪಾಯಿಗಳು ಬಂದಿದೆ. ಆದ್ದರಿಂದ ಈ ಜಿಲ್ಲೆಗೆ ತೊಂದರೆಯಾಗಿದೆ. ಈ ಕಾರ್ಯಕ್ರಮಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ.

7. ವಿದೇಶಗಳಲ್ಲಿ ಉದ್ಯೋಗ ದೊರಕಿಸಿಕೊಂಡ ರಾಜ್ಯ ಸರ್ಕಾರದ ನೌಕರರಿಗೆ ವೇತನ ಸಹಿತ ರಜೆ ಮಂಜೂರು

ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್):– ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರದ ಕಛೇರಿಗಳಲ್ಲಿ

ಖಾಯಂ ಹುದ್ದೆಯಲ್ಲಿರುವ ಎಷ್ಟೋ ಮಂದಿ ನೌಕರರು ವಿದೇಶಗಳಲ್ಲಿ ಉದ್ಯೋಗಾವಕಾಶ ಪಡೆಯುವಲ್ಲಿ ಆಸಕ್ತರಾಗಿದ್ದು ರಜೆಯ ಸೌಲಭ್ಯ ಮತ್ತು ಸರಕಾರದ ಸೂಕ್ತ ಉತ್ತೇಜನವಿಲ್ಲದೆ ಅದನ್ನು ಗಳಿಸಲಾರದವರಾಗಿರುತ್ತಾರೆ. ನಮ್ಮ ನೆರೆಯ ರಾಜ್ಯವಾದ ಕೇರಳದಲ್ಲಿ ಹೀಗೆ ವಿದೇಶಗಳಿಗೆ ಹೆಚ್ಚು ವೇತನ ತರುವ ಉದ್ಯೋಗಕ್ಕೆ ಹೋಗಬಯಸುವವರಿಗೆ ಐದು ವರುಷಗಳ ವೇತನರಹಿತ ರಜೆ ಮಂಜೂರು ಮಾಡಲಾಗುತ್ತಿದ್ದು ಅವನ್ನು ಹತ್ತು ವರುಷಗಳಿಗೆ ವಿಸ್ತರಿಸಲು ಯೋಚಿಸಲಾಗುತ್ತಿದೆ ಎಂದು ತಿಳಿದುಬಂದಿದೆ. ವಿದೇಶಗಳಲ್ಲಿ ಹೆಚ್ಚು ವೇತನದ ಹುದ್ದೆ ಗಳಿಸಿದ ನಂತರ ರಾಜ್ಯ ಸರ್ಕಾರದ ನೌಕರಿಗೆ ಈ ತರಹ ನೌಕರರು ಮರಳುವ ನಿದರ್ಶನಗಳು ಕಡಿಮೆಯಾದುದರಿಂದ ರಾಜ್ಯದ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಲಭ್ಯವಾಗುವುದು ಮಾತ್ರವಲ್ಲದೆ ವಿದೇಶಗಳಲ್ಲಿ ನೌಕರಿ ಪಡೆದವರಿಂದ ರಾಜ್ಯಕ್ಕೆ ವಿದೇಶಿ ಕೇವಣಿಯೂ ಹರಿದು ಬರುತ್ತದೆ. ಆ ಪ್ರಯುಕ್ತ ನಮ್ಮ ಕರ್ನಾಟಕ ರಾಜ್ಯ ಸರಕಾರವೂ ವಿದೇಶಗಳಲ್ಲಿ ಉದ್ಯೋಗಾವಕಾಶ ದೊರಕಿಸಿಕೊಂಡ ಮತ್ತು ದೊರಕಿಸಿಕೊಳ್ಳುವ ರಾಜ್ಯ ಸರ್ಕಾರಿ ನೌಕರರಿಗೆ ಐದು ವರ್ಷಗಳ ವೇತನ ರಹಿತ ರಜೆ ಮಂಜೂರು ನೀಡುವ ಕ್ರಮವನ್ನು ರೂಪಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಹೇಳುತ್ತೇನೆ. ಈ ವಿಷಯ ಪರಿಶೀಲನೆ ಮಾಡಲು ಸ್ವಲ್ಪ ಕಾಲಾವಕಾಶ ಬೇಕು. ಇದನ್ನು ನಾವು ಪರಿಶೀಲನೆ ಮಾಡುತ್ತೇವೆ.

ಛೇರ್ಮನ್:– ಈಗ ಶ್ರೀ ವಾಟಾಳ್ ನಾಗರಾಜ್ ಅವರು ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡುತ್ತಾರೆ.

ಶ್ರೀ ಡಿ. ಬಿ. ಚಂದ್ರೇಗೌಡ:– ಸಭಾಧ್ಯಕ್ಷರೇ, ಶ್ರೀ ವಾಟಾಳ್ ನಾಗರಾಜ್‌ರವರ ಭಾಷಣವನ್ನು ಕುಳಿತು ಕೇಳೋಣ ಅಂದರೆ ಕೋರಂ ಇಲ್ಲ. ನಿಯಮಾವಳಿ ಪ್ರಕಾರ ಮಿನಿಮಮ್ ಕೋರಂ ಬೇಕು. ಸಭೆಯನ್ನು ಮುಂದಕ್ಕೆ ಹಾಕಿ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಕೋರಂ ಬರಲಿ. ಒಂದು ಘಂಟೆ ಕಾಲ ಸಭೆಯನ್ನು ಮುಂದಕ್ಕೆ ಹಾಕಿ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಸಭಾಧ್ಯಕ್ಷರೇ, ಸಭೆಯನ್ನು ಅರ್ಧ ಘಂಟೆ ಕಾಲ ಮುಂದಕ್ಕೆ ಹಾಕಿ.

ಛೇರ್ಮನ್:– ಸಭೆಯನ್ನು ಅರ್ಧ ಘಂಟೆ ಕಾಲ ಮುಂದೂಡಲಾಗಿದೆ.

(ಸದನವು ಪುನಃ 3.30 ಗಂಟೆಗೆ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರು ತಮ್ಮ ಪೀಠದಲ್ಲಿ ಉಪಸ್ಥಿತರಾದರು)

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):– ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರಿಗೆ ವಂದನೆಯನ್ನು ಸಲ್ಲಿಸತಕ್ಕ ಭಾಷಣದ ಬಗ್ಗೆ ನಾನು ನಿನ್ನೆ ಮಾತನಾಡುವಾಗ ರಾಜ್ಯಾಂಗದ ಸಮಗ್ರ ಚಿಂತನೆಯನ್ನು ಈ ಸದನದ ಗಮನಕ್ಕೆ ತಂದೆ. ಈ ಒಂದು ರಾಜ್ಯಪಾಲರ ಭಾಷಣ, ಈ ವ್ಯವಸ್ಥೆ ಸಮಗ್ರವಾಗಿ ದೇಶದಲ್ಲಿ ಬದಲಾವಣೆ ಆಗಬೇಕು. ಈ ಬಗ್ಗೆ ಸಮಗ್ರ ಚಿಂತನೆ ಆರಂಭ ಆಗಬೇಕು. ನಾನು ಇಲ್ಲಿ ಏನು ಭಾಷಣವನ್ನು ಮಾಡಿದ್ದೇನೆ, ಈ ಬಗ್ಗೆ ರಾಷ್ಟ್ರಪತಿಯವರನ್ನೂ ಸಹ ಭೇಟಿ ಮಾಡಿ ಈ ಒಂದು ವಿಚಾರ ಇಡೀ ದೇಶಾದ್ಯಂತ ಚಿಂತನೆ ನಡೆಯುವ ರೀತಿ ಮಾಡುವುದಕ್ಕೆ ರಾಷ್ಟ್ರಪತಿಯವರು,